ದಿನಾಂಕ 08/08/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರಿದ ಪಾಟೀ ಸವಾಲುಃ ಶ್ರೀ ಬಿ.ಹೆಚ್.ವಿ. ವಕೀಲರಿಂದ

ನಾವು ವಿಭಾಗ ಮಾಡಿಕೊಂಡಾಗ ನನ್ನ ಹಿಸ್ಸೆಗೆ 115/6 ಮತ್ತು 118 ಬಂದಿರುತ್ತದೆ. ಸದರಿ ಆಸ್ತಿಗಳು ನಮ್ಮ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸರ್ವೆ ನಂ. 115/6 ರ 16 ಗುಂಟೆ ನಿಮ್ಮ ಪಿತ್ರಾರ್ಜಿತ ಆಸ್ತಿ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಅದು ಪಿತ್ರಾರ್ಜಿತ ಆಸ್ತಿಯಾಗಿದ್ದು ನಂತರ ಸರ್ಕಾರಿ ಬೀಳು ಆಗಿದ್ದು ನಾನು ನನ್ನ ಹೆಸರಿಗೆ ಮಂಜೂರಾತಿ ಮಾಡಿಸಿಕೊಂಡಿರುತ್ತೇನೆ. 2002 ನೇ ಇಸವಿ ಕಾಲಕ್ಕೆ ನನ್ನ ಮಕ್ಕಳೆಲ್ಲರೂ ಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸರಿ. 2002 ರಲ್ಲಿ ನಿಮ್ಮ ಮಕ್ಕಳು ವಯಸ್ಕರಾಗಿದ್ದ ಕಾರಣ ಎಲ್ಲರೂ ವ್ಯವಸಾಯ ಮಾಡುತ್ತಿದ್ದರು ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದು. ನಾಲ್ಕೂ ಮಂದಿ ವಿದ್ಯಾಭ್ಯಾಸ ಮಾಡುತ್ತಿದ್ದರು. ರಮೇಶನು ಆ ಕಾಲಕ್ಕೆ 7 ಅಥವಾ 8 ನೇ ತರಗತಿ ಓದುತ್ತಿದ್ದನು. ರವಿಕುಮಾರ ಮತ್ತು ಕುಮಾರ 10 ನೇ ತರಗತಿ ಓದುತ್ತಿದ್ದರು. ಆ ಕಾಲಕ್ಕೆ ರವಿಕುಮಾರ, ಪುಟ್ಟರಾಜು ಎಲ್ಲರೂ ಮದುವೆಯಾಗಿದ್ದರು ಎಂದರೆ ಸರಿಯಲ್ಲ.

2. 2002 ನೇ ಇಸವಿಯಲ್ಲಿ ನಾನು ಯಾವುದೇ ಜಮೀನಿನ ಖರೀದಿ ಮಾಡಿಲ್ಲ. ಸರ್ವೆ ನಂ. 74/4 ಮತ್ತು 74/2 ನ್ನು ನಾನು 1975 ನೇ ಇಸವಿಯಲ್ಲಿ ಖರೀದಿ ಮಾಡಿದ್ದೆನು. ಶಿಕ್ಷಕನಾಗಿ ನನಗೆ ಬರುತ್ತಿದ್ದ ಸಂಬಳದಿಂದ ನಾನು ಈ ಆಸ್ತಿಗಳನ್ನು ಖರೀದಿ ಮಾಡಿದ್ದೆನು. ನನಗೆ ಸಂಬಳದಿಂದ ಆದಾಯ ಆ ಕಾಲಕ್ಕೆ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಆ ಜಮೀನನ್ನು ಖರೀದಿ ಮಾಡುವ ಕಾಲಕ್ಕೆ ನಾವೆಲ್ಲರೂ ಒಟ್ಟು ಕುಟುಂಬದಲ್ಲಿದ್ದೆವು ಎಂದರೆ ಸರಿ.

3. 2 ಎಕರೆ 30 ಗುಂಟೆಯನ್ನು 1991 ರಲ್ಲಿ ಖರೀದಿ ಮಾಡಿರುತ್ತೇನೆ. ಆ ಕಾಲಕ್ಕೆ ನಾವೆಲ್ಲಾ ಒಟ್ಟು ಕುಟುಂಬದಲ್ಲಿದ್ದೆವು ಎಂದರೆ ಸರಿ. 1991 ರಲ್ಲಿ ಖರೀದಿ ಮಾಡಿದ್ದು ನನ್ನ ಪಿಂಚಣಿ ಹಣದಿಂದ ಆಗಿರುತ್ತದೆ. ಪಿಂಚಣಿ ಹಣದಿಂದ ಸದರಿ ಖರೀದಿ ಮಾಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕುಟುಂಬದ ಹಿರಿಯರಾಗಿದ್ದ ಕಾರಣ ಎಲ್ಲಾ ದಾವಾ ಆಸ್ತಿಗಳನ್ನು ನಿಮ್ಮ ಹೆಸರಿನಲ್ಲಿ ತೆಗೆದುಕೊಂಡಿದ್ದೀರಿ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ನನ್ನ ಹಣದಿಂದ ನಾನು ಖರೀದಿ ಮಾಡಿರುವ ಕಾರಣ ನನ್ನ ಹೆಸರಿನಲ್ಲಿದೆ ಎಂದು. ಪಿತ್ರಾರ್ಜಿತ ಆಸ್ತಿಗಳನ್ನು

ನನ್ನ ಮಕ್ಕಳಿಗೆ ಹಂಚಿ ಶಿಕ್ಷಕನಾಗಿ ನನಗೆ ಬರುತ್ತಿದ್ದ ಆದಾಯದಿಂದ ಬೇರೆ ಆಸ್ತಿಗಳನ್ನು ಖರೀದಿ ಮಾಡಲು ನನಗೆ ತೊಂದರೆ ಇರಲಿಲ್ಲ. ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಗಳನ್ನು ಹಂಚಿಕೆ ಮಾಡದೇ ನಾನೇ ಆಸ್ತಿ ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ.

4. ಸರ್ವೆ ನಂ. 74/2 ರಲ್ಲಿ ವಾದಿಯೇ ಸ್ವಾಧೀನದಲ್ಲಿದ್ದಾರೆ ಎಂದು ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಪ್ರಕ್ರಿಯೆ ಜರುಗಿಸಿ ವರದಿಯನ್ನು ನೀಡಿದ್ದಾರೆ ಎಂದರೆ ಸರಿಯಲ್ಲ ವಾದಿಗೆ ಆಸ್ತಿಯಲ್ಲಿ ಭಾಗ ನೀಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ 3 ನೇ ಪ್ರತಿವಾದಿಗೆ ದಾನಪತ್ರ ಮಾಡಿದ್ದೀರಿ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಅವರು ನನಗೆ ಸಹಾಯ ಮಾಡುತ್ತಿರುವ ಕಾರಣ ಅವರಿಗೆ ದಾನಪತ್ರ ಮಾಡಿದ್ದೇನೆ ಎಂದು. 3 ನೇ ಪ್ರತಿವಾದಿ ಈ ಪ್ರಕರಣದ ವಾದಿಯ ಮೇಲೆ ಅಪರ ನ್ಯಾಯಾಲಯದಲ್ಲಿ 74/2 ರ ಪೈಕಿ ದಾವೆ ಸಲ್ಲಿಸಿದ್ದಾರೆ ಎಂದರೆ ನನಗ ಗೊತ್ತಿಲ್ಲ.

5. ಡಿ ಅನುಸೂಚಿ ಮನೆಯನ್ನು ಕಟ್ಟಬೇಕಾದರೆ ನಾವೆಲ್ಲರೂ ಒಟ್ಟು ಕುಟುಂಬದಲ್ಲಿದ್ದೆವು ಎಂದರೆ ಸರಿ. ಸದರಿ ಮನೆಯನ್ನು ಭಾಗ ಮಾಡಿಕೊಟ್ಟಿದ್ದೀರೇ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ರಮೇಶನೇ ಆ ಮನೆಯಲ್ಲಿ ಇದ್ದಾರೆ ಎಂದು. ಮಿಕ್ಕಾ ಮಕ್ಕಳಿಗೆ ಸದರಿ ಮನೆಯಲ್ಲಿ ನೀವು ಭಾಗ ಕೊಟ್ಟಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ ಪುಟ್ಟರಾಜು ಸದರಿ ಮನೆಯಲ್ಲಿ ಇದ್ದನು, ಆತನಿಗೆ ಬೇರೆ ಮನೆ ಸಿಕ್ಕಿದ ಕಾರಣ ಆತನು ಬೇರೆ ಮಾಡಿರುತ್ತೇನೆ ಎಂದು.

6. ರಾಜೇಗೌಡ ನನಗೆ ಶಟುಕನಾಗಿರುತ್ತಾನೆ. ಹರದನಹಳ್ಳಿ ಶಿವಣ್ಣ ನನ್ನ ಚಿಕ್ಕಪ್ಪನ ಮಗನಾಗುತ್ತಾನೆ. ವಿಭಾಗ ಆಗುವ ಕಾಲದಲ್ಲಿ ಇವರ್ಯಾರು ಉಪಸ್ಥಿತರಿರಲಿಲ್ಲ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.